# ಏಕತಾನತೆಯ ಪಾತ್ರ ಶ್ವೇತಾ ಒಲ್ಲದ ಸಿದ್ಧಸೂತ್ರ



ತಾಯಿಯಾದ ನಂತರ ಸಿನಿಮಾಗಳಿಂದ ಬಿಡುವು ಪಡೆದುಕೊಂಡಿದ್ದ ನಟಿ ಶ್ವೇತಾ ಶ್ರೀವಾತ್ಸವ, ಇದೀಗ ಒಟ್ಟೊಟ್ಟಿಗೆ ನಾಲ್ಕು ಸಿನಿಮಾಗಳ ಆಫರ್ ಕೈಯಲ್ಲಿಟ್ಟುಕೊಂಡು ಮರಳಿದ್ದಾರೆ. ಈ ಸಂದರ್ಭ, ತಮ್ಮ ಈವರೆಗಿನ ಸಿನಿಮಾ ಜರ್ನಿ ಕುರಿತು ಮಾತನಾಡಿದ್ದಾರೆ.

ಶ್ವೇತಾ, ಕನ್ನಡ ಸಿನಿಮಾರಂಗಕ್ಕೆ ಬಂದು ಸುಮಾರು 15 ವರ್ಷಗಳಾಗಿವೆ. ಆದರೂ ಕಾಣಿಸಿಕೊಂಡಿರುವುದು ಬೆರಳೆಣಿಕೆಯಷ್ಟು ಚಿತ್ರಗಳಲ್ಲಿ ಮಾತ್ರ. ಮಾಡಿದ ಕೆಲವೇ ಚಿತ್ರಗಳಲ್ಲಿ ತಮ್ಮನ್ನು ತಾವು ಉತ್ತಮ ಕಲಾವಿದೆಯಾಗಿ ನಿರೂಪಿಸಿಕೊಂಡವರು. ಚಿತ್ರರಂಗಕ್ಕೆ ಬಂದು ದಶಕ ಕಳೆದರೂ ತಾವು ಎಂಟು ಸಿನಿಮಾಗಳಲ್ಲಿ ಮಾತ್ರ ನಟಿಸಿದ್ದರ ಬಗ್ಗೆ ತಾವೇ ಅಚ್ಚರಿಪಡುತ್ತ, ಈಗ ಒಂದೇ ವರ್ಷದಲ್ಲಿ ನಾಲ್ಕು ಸಿನಿಮಾಗಳಲ್ಲಿ ನಟಿಸುತ್ತಿರುವುದಾಗಿ ಹೇಳುತ್ತಾರೆ.

ಅಂಕಿಸಂಖ್ಯೆಗಿಂತ ಗುಣಮಟ್ಟ ಮುಖ್ಯ ಎಂಬುದು ಶ್ವೇತಾ ಅಭಿಪ್ರಾಯ. ಸಿನಿಮಾರಂಗದ ಯಾವುದೇ ಸಂಪರ್ಕವಿಲ್ಲದೆ, ಮಧ್ಯಮವರ್ಗದ ಕುಟುಂಬದಿಂದ ಬಂದು ಇಲ್ಲಿ ನೆಲೆ ಕಂಡುಕೊಂಡ ಹಿಂದಿನ ತಮ್ಮ ಸವಾಲು, ಶ್ರಮ, ತಮ್ಮನ್ನು ತಾವು ರೂಪಿಸಿಕೊಂಡ ಬಗೆಯ ಬಗ್ಗೆ ಅವರಿಗೆ ಹೆಮ್ಮೆಯಿದೆ.

ಸಿನಿಮಾ ರಂಗದಲ್ಲಿನ ಕಹಿಸತ್ಯಗಳ ಕುರಿತು ತನಗೆ ಮಾರ್ಗದರ್ಶನ ನೀಡಲು ಯಾರೂ ಇರಲಿಲ್ಲ ಎನ್ನುವ ಅವರು, ತಮ್ಮದೇ ಅನುಭವಗಳಿಂದ ಪಾಠ ಕಲಿತಿರುವುದಾಗಿ ಹೇಳುತ್ತಾರೆ. ಸಿನಿಮಾ ಆಫರ್‌ಗಳ ಕೊರತೆಗೆ ತಮ್ಮ ನಿಷ್ಠುರತೆಯೂ ಕಾರಣವಿರಬಹುದು ಎನ್ನುತ್ತಾರೆ ಅವರು. ‘ನಾನು ಒಂದೇ ರೀತಿಯ ಪಾತ್ರಗಳಿಗೆ ಫಿಟ್ ಆಗಲು ಇಷ್ಟಪಡುವುದಿಲ್ಲ. ಒಂದು ಸಿನಿಮಾ ಹಿಟ್ ಆದರೆ, ಅದೇ ರೀತಿಯ ಕಥೆ ಇಟ್ಟುಕೊಂಡು ಬರುತ್ತಾರೆ. ‘ಸಿಂಪಲ್ಲಾಗ್ ಒಂದ್ ಲವ್‌ಸ್ಟೋರಿ’ ಸಿನಿಮಾ ಸೆನ್ಸೇಷನ್ ಆದ ನಂತರ, ಅದೇ ರೀತಿಯ ಡೈಲಾಗ್ ಆಧರಿತ ಪಾತ್ರಗಳೇ ನನಗೆ ಸಿಕ್ಕವು. ಅವನ್ನೆಲ್ಲ ನಿರಾಕರಿಸಿದೆ’ ಎನ್ನುತ್ತಾರೆ.

ತಾಯ್ತನವನ್ನು ಅನುಭವಿಸಬೇಕೆಂಬ ಕಾರಣಕ್ಕೆ ಸಿನಿಮಾದಿಂದ 3 ವರ್ಷ ಬ್ರೇಕ್ ತೆಗೆದುಕೊಂಡು ಮರಳಿದಾಗ ಅವರ ಮುಂದೆ ಬಂದಿದ್ದು ತಾಯಿ ಪಾತ್ರಗಳು. ಸ್ಟಿರಿಯೊಟಿಪಿಕಲ್ ಪಾತ್ರಗಳಿಂದ ಸಿನಿಮಾರಂಗಕ್ಕೆ ಮರಳುವುದು ನನಗೆ ಇಷ್ಟವಿರಲಿಲ್ಲ ಎಂದು ನೇರವಾಗಿಯೇ ನುಡಿದಿದ್ದಾರೆ.

‘ಆಗೆಲ್ಲಾ ನಟಿಯರು ಮದುವೆಯಾದ ನಂತರ ನಟನೆಗೆ ಬರುವುದು ಅಸಾಧ್ಯವೆನಿಸಿತ್ತು. ಸಿನಿಮಾರಂಗದಲ್ಲಿ ಲಿಂಗತಾರತಮ್ಯದ ಕುರಿತು ನಾನು ಸದಾ ಜಾಗೃತವಾಗಿದ್ದೇನೆ. ಸಿನಿಮಾ ಕ್ಷೇತ್ರದಲ್ಲಿ ಮಹಿಳಾ ಸೂಪರ್‌ಸ್ಟಾರ್ ಯಾಕಿಲ್ಲ ಎಂಬ ವಿಷಯ ನನ್ನಲ್ಲಿ ಈಗಲೂ ಅಚ್ಚರಿ ಮೂಡಿಸುತ್ತದೆ. ಸೂಪರ್‌ಸ್ಟಾರ್‌ಗಳನ್ನು ಸೃಷ್ಟಿಸುವ ನಿರ್ಮಾಪಕರು ಏಕೆ ಮಹಿಳಾ ಸೂಪರ್ ಸ್ಟಾರ್‌ಗಳನ್ನು ಹುಟ್ಟುಹಾಕುವುದಿಲ್ಲ’ ಎನ್ನುವ ಶ್ವೇತಾ ಅವರ ಪ್ರಶ್ನೆಗೆ ಉತ್ತರಿಸುವವರು ಯಾರು?

‘ಹಿಟ್ ಸಿನಿಮಾಗಳನ್ನು ಕೊಟ್ಟರೂ, ನಿರ್ದೇಶಕರು, ನಿರ್ಮಾಪಕರಿಗೆ ಪ್ರತಿಭೆಗಿಂತ ನನ್ನ ವಯಸ್ಸು ಹಾಗೂ ಮದುವೆಯೇ ಮುಖ್ಯವಾಗಿತ್ತು. ನಾನು ಸಾಕಷ್ಟು ಸಿನಿಮಾಗಳನ್ನು ಮಾಡಿಲ್ಲದೇ ಇರಬಹುದು. ಆದರೆ ಇದುವರೆಗೂ ಮಾಡಿರುವ ಸಿನಿಮಾಗಳು ಪ್ರೇಕ್ಷಕರ ಮೇಲೆ ಪರಿಣಾಮ ಬೀರುವಂಥವು. ನನ್ನ ಸಿನಿಮಾ ಬಯಸಿ ಬಂದ ಪ್ರೇಕ್ಷಕರ ನಿರೀಕ್ಷೆಗಳನ್ನು ಹುಸಿ ಮಾಡುವುದಿಲ್ಲ’ ಎನ್ನುತ್ತಾರೆ.

ಶ್ವೇತಾ ಶ್ರೀವಾತ್ಸವ ಅವರು ಪ್ರಸ್ತುತ ‘ಚೆಕ್ಕಿಯ ಮೂಗುತಿ’ ಹಾಗೂ ‘ರಾಘವೇಂದ್ರ ಸ್ಟೋರ್ಸ್’ ಸಿನಿಮಾದಲ್ಲಿ ಅಭಿನಯಿಸುತ್ತಿದ್ದಾರೆ. ಅವರ ಮತ್ತೂ ಎರಡು ಸಿನಿಮಾಗಳು ಘೋಷಣೆಯಾಗಬೇಕಿವೆ. ತಮ್ಮ ಸಿನಿಮಾ ಜರ್ನಿ ಕುರಿತು ಪುಸ್ತಕವನ್ನೂ ಬರೆಯುತ್ತಿದ್ದಾರೆ ಶ್ವೇತಾ. ■